**Holding of Elections to the Co-operative Socities in the State.**

1399 SRI H. GANGADHARAN (Krishnaraj).—and G. RAMEGOWDA (Doddaballapur).— P. RAMDEV (Malleswaram).— S. M. LINGAPPA (Krishnarajpet).— P. P. HEGRE (Chikodi).— D. T MAYANNA (Huliyurdurga).— MICHAEL B. FERNADES (Bharathinagar).—M. CHANDRASHEKAR (Jayanagar). K. H. SRINIVAS (Shimoga).—K RAMBHAT (Puttur) SPRI BHAVU RAO DESHPANDE (Dharwad).—Will the Minister for Co-operation be pleased to state.—

(a) the reasons for postponing elctions to the Co-operative nstitutions in the state.

(b) is the Government intendrng to nominate members :

(c) whether the Government follow the principle of reservation to the co-operative societies and Banks.

SRI H. C. SRIKANTAIAH (Minister for Co-operation).—

(a) The reasons are :

1. To facilitate a review of the existing co-operative structu and introduction of structural changes in the co-operative movement to make the movement the effective vehicle for rural development.

2. Considerable amount of thinking and studying of the existing co-operative structure in the State requires some time before the final decision of Government on these matters is taken : and

3. Government needs some time to study the recommendations made on Sri K. H. Patils report.

(b) No.

(c) At present, there is no provision in the KCS Act. 1959 for reservation on the Committee of Management of the Co-operative Societies and Banks.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮಾನ್ಯ ಅಧ್ಯಕ್ಷರೇ, ನಾನು ನಮ್ಮ ಇಲಾಖೆಯ ಬೇಡಿಕೆಗಳ ಮೇಲೆ ಉತ್ತರ ಕೊಡುವಾಗ ಈ ವಿಚಾರದಲ್ಲಿ ವಿವರವಾಗಿ ಉತ್ತರ ಕೊಟ್ಟಿದ್ದೇನೆ. ಮಾನ್ಯ ಸದಸ್ಯರ ಬೇಕಾದರೆ ಪುನಃ ಪ್ರಶ್ನೆಗಳನ್ನು ಕೇಳಬಹುದು.

ಶ್ರೀ ಎಚ್. ಗಂಗಾಧರನ್.—ಶ್ರೀ ಕೆ. ಎಚ್. ಪಾಟೀಲರ ವರದಿಯನ್ನು ಓದಲು ತಮಗೆ ಬಹಳ ಕಾಲ ಬೇಕಾಗಬಹುದು. ಅದರ ಆದಾರದ ಮೇಲೆ ತಾವು ಯಾವುದೇ ಕಾರ್ಯಕ್ರಮ ಬೇಕಾದರೂ ತೆಗೆದು ಕೊಳ್ಳಿ. ಆದರೆ ಆರ್ಡಿನೆನ್ಸ್ ಇಸವಿಯಿಂದ ನಪೆದುಕೊಂಡು ಬಂದಿರುವ ಪದ್ಧತಿಯ ಪ್ರಕಾರ ಚುನಾವಣೆ ನಡೆಸುವುದಕ್ಕೆ ತಮಗೆ ಇರುವಂತಹ ತೊಂದರೆಯಾದರೂ ಏನು ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಶ್ರೀ ಕೆ ಎಚ್. ಪಾಟೀಲರ ವರದಿಯಲ್ಲಿ ಇರತಕ್ಕಂಥ ಮುಖ್ಯವಾದ ಅಂಶಗಳು ಯಾವುವು ಮತ್ತು ಯಾವುದನ್ನು ಆರ್ಡಿನೆನ್ಸ್ ಮೂಲಕ ಜಾರಿಗೆ ತರಬೇಕು ಎಂಬುದನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ. ಈ ರೀತಿ ಮಾಡಲು ನಮಗೆ ಇನ್ನೂ ಸ್ವಲ್ಪ ಕಾಲಾವಕಾಶ ಬೇಕು.

ಶ್ರೀ ಕೆ ರಾಮಭಟ್.—ಶ್ರೀ ಕೆ. ಎಚ್. ಪಾಟೀಲರ ವರದಿಯನ್ನು ಅಭ್ಯಸಿಸಲು ತಮಗೆ ಇನ್ನೂ ಎಷ್ಟು ಸಮಯ ಬೇಕಾಗುತ್ತದೆ ? ೧೯೮೩ನೇ ಇಸವಿ ಫೆಬ್ರವರಿ ತಿಂಗಳಿನಲ್ಲಿ ಯಾದರೂ ಇದಕ್ಕೆ ಸೂಕ್ತ ತಿದ್ದುಪಡಿ ಮಾಡುವುದರ ಮೂಲಕ ಚುನಾವಣೆ ನಡೆಸುತ್ತೇವೆಂದು ಆಶ್ವಾಸನೆ ಕೊಡುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಈಗಾಗಲೇ ನಾಲ್ಕಾರು ಸಲ ಹೇಳಿದ್ದೇನೆ. ಅಕಾರಣ ಹೊಸದಾಗಿ ಆಶ್ವಾಸನೆ ಕೊಡುವುದೇನೂ ಉಳಿದಿಲ್ಲ. ಈ ವರದಿಯಲ್ಲಿರುವ ಯಾವುದೊವ ಅಂಶಗಳನ್ನು ಆರ್ಡಿನೆನ್ಸ್ ಮೂಲಕವಾದರೂ ಜಾರಿಗೆ ಕೊಡಬೇಕೆಂಬುದನ್ನು ಸರ್ಕಾರ ವಿಚಾರ ಮಾಡುತ್ತಿದೆ ಮತ್ತು ಜನರಲ್ ಬಾಡಿ ಮೀಟಿಂಗ್ ನಡೆಸಲು ಸರ್ಕಾರ ಎಲ್ಲ ರೀತಿಯ ಕಾರ್ಯಕ್ರಮಗಳನ್ನು ಸರ್ಕಾರ ತೆಗೆದು ಕೊಂಡಿದೆ ಎಂದು ಈಗಾಗಲೇ ಈ ಸಭೆಗೆ ತಿಳಿಸಿದ್ದೇನೆ.

ಶ್ರೀ ಎಚ್. ಗಂಗಾಧರನ್.—ತಾವು ಆಶ್ವಾಸನೆಯನ್ನು ಧಾರಾಳವಾಗಿ ಕೊಡುತ್ತೀರಿ. ಮೇಲಿಂದ ಮೇಲೆ ಆಶ್ವಾಸನೆಗಳನ್ನು ಕೊಡುತೀರಿ, ಆದರೆ ನಮಗೆ ಬೇಕಾಗಿರುವುದು ತಾವು ಯಾವಾಗ ಮತ್ತು ಎಷ್ಟು ದಿವಸಗಳಲ್ಲಿ ಚುನಾವಣೆ ಮಾಡುತ್ತೀರಾ ಎಂಬುದು. ಇಲ್ಲಿ ತಮ್ಮ ಉತ್ತರದಲ್ಲಿ ಸದಸ್ಯರುಗಳನ್ನು ನಾಮಕರಣ ಮಾಡುವ ಉದ್ದೇಶವಿಲ್ಲವೆಂದು ಹೇಳಿದ್ದೀರಿ. ಆದರೂ ಸಹ ಮುಂದಿನ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ತಮ್ಮ ಏಜೆನ್ಸಿಗಳನ್ನು ನಾಮಕರಣ ಮಾಡುವ ಉದ್ದೇಶ ಏನಾದರೂ ಇದೆಯೇ ಅಥವಾ ಪ್ರಜಾಪ್ರಭುತ್ವದ ತತ್ವಕ್ಕೆ ಅನುಗುಣವಾಗಿ ತಾವು ಇವುಗಳಿಗೆ ಚುನಾವಣೆ ನಡೆಸುತ್ತೀರಾ ಹೇಗೆ ಎಂಬುದನ್ನು ಖಚಿತವಾಗಿ ತಿಳಿಸಬೇಕು ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಪ್ರಜಾಪ್ರಭುತ್ವ ಆದರ್ಶಗಳನ್ನು ಅನುಸರಿಸಬೇಕೆಂದುಕೊಂಡೇ ಈ ಒಂದು ಕಮಿಟಿಯನ್ನು ರಚನೆ ಮಾಡಿದ್ದು. ಪಕ್ಷದ ಸದಸ್ಯರನ್ನು ಅಂದರೆ ಸಹಕಾರ ಕ್ಷೇತ್ರದಲ್ಲಿ ಹೆಚ್ಚಿನ ಅನುಭವವಿರುವವರನ್ನು ನೋಡಿಕೊಂಡು ಈ ಕಮಿಟಿಗೆ ಸದಸ್ಯರನ್ನಾಗಿ ನೇಮಕ ಮಾಡಿತು. ಈಗ ಅವರು ಕೊಟ್ಟಿರುವಂತಹ ವರದಿಯನ್ನು ಜಾಗ್ರತೆ ಕಾರ್ಯಗತ ಮಾಡುವುದಕ್ಕೆ ಸರ್ಕಾರ ಎಲ್ಲ ರೀತಿಯ ಕಾರ್ಯಕ್ರಮವನ್ನೂ ಕೈಕೊಂಡಿದೆ. ಆ ಬಗ್ಗೆ ತಾವು ಅನುಮಾನ ಪಡಬೇಕಾಗಿಲ್ಲ. ಶ್ರೀ ಕೆ. ಎಚ್. ಪಾಟೀಲರ ವರದಿಯಲ್ಲಿ ಸದಸ್ಯರನ್ನು ನಾಮಕರಣ ಮಾಡಬಾರದೆಂದು ಹೇಳಿದೆ. ಆದಕಾರಣ ಈ ವರದಿ ಬಗ್ಗೆ ಸರ್ಕಾರ ಒಂದು ತೀರ್ಮಾನ ತೆಗೆದುಕೊಂಡಾಗ ಅದನ್ನು ನಿಮಗೆ ತಿಳಿಸುತ್ತೇವೆ.

ಶ್ರೀ ಕೆ. ರಾಮಭಟ್ಟ್.—ಕಳೆದ ಎರಡು ವರ್ಷಗಳಿಂದ ಚುನಾವಣೆ ನಡೆಸದಿರುವುದನ್ನು ನೋಡಿದರೆ ಪ್ರಜಾಪ್ರಭುತ್ವ ಅಂದರೆ ಏನು ಎಂಬುದನ್ನು ಹೊಸದಾಗಿ ಡಿಫೈನ್ ಮಾಡಬೇಕಾಗುತ್ತದೆ.

(ಉತ್ತರವಿಲ್ಲ)

ಶ್ರೀ ಎಸ್. ಎಸ್. ಮಹಾಜನ್.—ಶ್ರೀ ಕೆ. ಎಚ್. ಪಾಟೀಲರ ವರದಿ ತಮ್ಮ ಕೈಗೆ ಬಂದು ೫-೬ ತಿಂಗಳಾಗಿರಬಹುದು. ಇದನ್ನು ಜಾರಿಗೆ ಕೊಡಲು ಇನ್ನು ಎಷ್ಟು ಕಾಲ ತಮಗೆ ಬೇಕಾಗುತ್ತದೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ದಿವಸ ತಿಂಗಳು ಪ್ರಶ್ನೆ ಅಲ್ಲ, ಇದು ಸಧ್ಯದಲ್ಲಿಯೇ ಆಗುತ್ತದೆ.

ಶ್ರೀ ಎಸ್. ಎಸ್. ಮಹಾಜನ್.—ತಾವು ಕಾಲಮಿತಿಯನ್ನು ಗೊತ್ತುಮಾಡಬೇಕು. ಸಧ್ಯದಲ್ಲಿಯೇ ಆಗುತ್ತದೆಂದರೆ ಇನ್ನು ಎಷ್ಟು ದಿವಸಗಳಲ್ಲಿ ಆಗುತ್ತದೆ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಸಧ್ಯದಲ್ಲಿಯೇ ಆಗುತ್ತದೆ.—ಆದಾಗ ತಮಗೆ ಗೊತ್ತಾಗುತ್ತದೆ.

ಶ್ರೀ ಮೈಕೆಲ್ ಬಿ. ಫರ್ನಾಂಡೀಸ್.—ಶ್ರೀ ಕೆ. ಎಚ್. ಪಾಟೀಲರ ವರದಿಯನ್ನು ನಮಗೆ ಇನ್ನೂ ಒದಗಿಸಿಲ್ಲ. ಇದರ ಒಂದು ನೆಪದಲ್ಲಿ ತಾವು ಕಳೆದ ಎರಡು ವರ್ಷಗಳಿಂದ ಚುನಾವಣೆಯನ್ನು ನಡೆಸಲಿಲ್ಲ. ಮುಖ್ಯವಾಗಿ ಈ ವರದಿಯನ್ನು ನಮಗೆಲ್ಲಾ ಕೊಡುತ್ತೀರಾ

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಈ ವರದಿಯನ್ನು ತಮಗೆಲ್ಲರಿಗೂ ತಲುಪಿಸುವುದಕ್ಕೆ ಏರ್ಪಾಡು ಮಾಡುತ್ತೇನೆ.

ಶ್ರೀ ಮೈಕೆಲ್ ಬಿ. ಫರ್ನಾಂಡೀಸ್.—ಈ ಸಹಕಾರ ಸಂಘಗಳ ಪೈಕಿ ಕೆಲವು ಅಂದರೆ ಸರ್ಕಾರದ ಇರುಪ ಕಡೆಗಳಲ್ಲಿ ಅವು ಸರ್ಕಾರದ ಹತೋಟಿಯಲ್ಲಿರುತ್ತವೆ. ಮತ್ತೆ ಕೆಲವು ಸಹಕಾರ ಸಂಘಗಳ ವಿಚಾರದಲ್ಲಿ ಸರ್ಕಾರದ ಪಾತ್ರ ಏನೂ ಇರುವುದಿಲ್ಲ. ಸರ್ಕಾರದಿಂದ ರಿಜಿಸ್ಟ್ರೇಷನ್ ಮಾಡಿಸುವುದು ಮತ್ತು ಆಡಿಟ್ ಮಾಡಿಸುವುದನ್ನು ಬಿಟ್ಟರ ಬೇರೆ ಯಾ ಪಾತ್ರವೂ ಇರುವುದಿಲ್ಲ. ಈಗ ಐ. ಟಿ. ಐ. ನಲ್ಲಿ ಒಂದು

ಸಹಕಾರಸಂಘ ಇದೆ. ಅಲ್ಲಿ ಒಂದು ಕೋಟಿಗೂ ಮೀರಿ ಹಣದ ವ್ಯವಹಾರ ನಡೆಯುತ್ತಿದೆ. ಆದರೆ ಅಲ್ಲಿಯೂ ಸಹ ಕಳೆದ ಎರಡು ವರ್ಷಗಳಿಂದ ಚುನಾವಣೆ ನಡೆಸುವುದಕ್ಕೆ ಆಗಿಲ್ಲ. ಜನರಲ್ ಬಾಡಿ ಮೀಟಿಂಗ್ ನಡೆಸುವುದಕ್ಕೂ ಆಗಿಲ್ಲ. ಈ ಕಾರಣದಿಂದ ಈ ಸಹಕಾರ ಸಂಘಗಳನ್ನು ಎರಡಂ ವಿಭಾಗ ಗಳನ್ನಾಗಿ ಮಾಡಿ ಯಾವ ಯಾವ ಸಹಕಾರ ಸಂಘಗಳಲ್ಲಿ ಸರ್ಕಾರದ ಪ್ರವೇಶ ಇರುವುದಿಲ್ಲವೋ ಮತ್ತು ಸರ್ಕಾರದ ಹಣವನ್ನು ತೊಡಗಿಸಿರುವುದಿಲ್ಲವೋ ಅಂತಹ ಸಹಕಾರಸಂಘಗಳಿಗೆ ಸಂಪೂರ್ಣವಾದಂಥ ಸ್ವಾತಂತ್ರ್ಯ ಕೊಡುವುದರ ಜೊತೆಗೆ ಅಲ್ಲಿ ಚುನಾವಣೆ ನಡೆಸುವುದಕ್ಕೆ ಮತ್ತು ಜನರಲ್ ಬಾಡಿ ಮೀಟಿಂಗ್ ನಡೆಸಲು ಅವಕಾಶ ಮಾಡಿಕೊಡುತ್ತೀರಾ ಇಂತಹ ಸಹಕಾರ ಸಂಘಗಳಲ್ಲಿ ಚುನಾವಣೆ ನಡೆಸುವುದಕ್ಕೆ ಸಾಧ್ಯವಾಗದಿದ್ದರೆ ಜನರಲ್ ಬಾಡಿ ಮೀಟಿಂಗ್ ಆದರೂ ನಡೆಯಬೇಕೆಂದು ಆದೇಶ ಕೊಡುತ್ತೀರಾ

ಶ್ರೀ ಎಚ್. ಸಿ. ಶ್ರೀಕಂಠಯ್ಯ —ಇದನ್ನು ಪರಿಶೀಲನೆ ಮಾಡುತ್ತೇವೆ.

## Establishment of a Starch Factory in Bijapur District

748 SRI V. V. PATTAR(Jamkhadi). -Will the Chief Minister be pleased to state:—

(a) whether it is a fact that there is abundant production of mazi (i.e.. nearly a million qnintals per year) in G.D.B.C. area of Bijapur District.

(b) whether it is a fact that there is no public sector or joint sector indurstry in Bijpur District in this regard.

(c) If so, whether the Government would consider to establish a starch factory in this area ?

SRI R. GUNDURAO (Chif Minister).—

(a) The estimated production in 1980-81 was about 500,000 quintals and in 1981-82 about 600,000 quintals.

(b) Yes.

(c) No. But Government is prepared to extend all help if enterpreneurs come forward to set up starce industry in Bijapur district.

ಶ್ರೀ ವಿ.ವಿ. ಪತ್ತಾರ್.—ಬಿಜಾಪುರ ಜಿಲ್ಲೆಯ ಘಟಪ್ರಭಾ ಎಡದಂಡೆ ನಾಲೆಯ ಕ್ಷೇತ್ರದಲ್ಲಿ ಸುಮಾರು ೬ ಲಕ್ಷ ಕ್ವಿಂಟಾಲ್ ಗೋವಿನ ಜೋಳವನ್ನು ಬೆಳೆಯಲಾಗುತ್ತಿದೆ ಎಂಬುದನ್ನು ಸರ್ಕಾರ ಒಪ್ಪಿಕೊಂಡಿದೆ. ಈ ಒಕ್ಕಲುತನದಿಂದ ಬರುವಂತಹ ಈ ಸರಕನ್ನು ಸರಿಯಾಗಿ ಉಪಯೋಗಿಸಲು ಅಲ್ಲಿ ಯಾವ ಕಾರ್ಖಾನೆಗಳೂ ಇಲ್ಲ. ಇದರಿಂದ ಎಣ್ಣೆ, ಗ್ಲೂಕೋಸ್ ಮುಂತಾದ ವಸ್ತುಗಳನ್ನು ತಯಾರು ಮಾಡಬಹುದು. ಆದರೆ ದಕ್ಷಿಣ ಹಿಂದೂಸ್ಥಾನದಲ್ಲಿಯೇ ಇಂತಹ ಒಂದು ಗಂಜಿ ಕಾರ್ಖಾನೆ ಇಲ್ಲವೆಂದರೆ ಅತ್ಯಾಶ್ಚರ್ಯವಿಲ್ಲ. ನಮ್ಮ ಉತ್ತರ ಕರ್ನಾಟಕದಲ್ಲಿಯೂ ಸಹ ಇಂತಹ ಕಾರ್ಖಾನೆ ಸಾರ್ವಜನಿಕರ ಅಥವಾ ಸಂಯುಕ್ತ ಕ್ಷೇತ್ರಗಳಲ್ಲಿ ಇಲ್ಲವೆಂಬುದನ್ನು ಸರ್ಕಾರ ಒಪ್ಪಿದೆ. ಆದಕಾರಣ ನಮ್ಮ ಬಿಜಾಪುರ ಜಿಲ್ಲೆಕೈಗಾರಿಕೆಯಲ್ಲಿ ಅತ್ಯಂತ ಹಿಂದುಳಿದಿರುವುದರಿಂದ ಅಲ್ಲಿ ಜಾಯಿಂಟ್ ಸೆಕ್ಟಾರ್‌ನಲ್ಲಿ ಇಂತಹ ಒಂದು ಕಾರ್ಖಾನೆಯನ್ನು ಪ್ರತಕ್ಕೆ ಪ್ರಾರಂಭ ಮಾಡಬಾರದು

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಬಿಜಾಪುರದಲ್ಲಿ ಹಾಗೂ ಜಮಖಂಡಿ, ಮುಧೋಳ್, ಬಿಳಗಿ ತಾಲ್ಲೂಕ್‌ಗಳಲ್ಲಿ ಮುಸುಕಿನ ಜೋಳವನ್ನು ಹೆಚ್ಚಾಗಿ ಬೆಳೆಯುತ್ತಿದ್ದಾರೆ. ಈ ರೀತಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಿರುವ ಜೋಳವನ್ನು ಪೂರ್ಣಪ್ರಮಾಣದಲ್ಲಿ ಉಪಯೋಗಿಸಿಕೊಳ್ಳಲು ಅಲ್ಲಿ ಒಂದು ಗಂಜಿ